ಆ) ಕಳೆದ ಮೂರು ವರ್ಷಗಳಿಂದ ಎಷ್ಟು ಕಾರ್ಮಿಕ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿವೆ?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) :

ಅ) ಕಾರ್ಮಿಕ ನ್ಯಾಯಾಲಯಗಳು - 10
ಆ) ಔದ್ಯಮಿಕ ನ್ಯಾಯಾಧೀಕರಣಗಳು - 04

ಒಟ್ಟು : - 14

ಆ)

ವರ್ಷ	ಇತ್ಯರ್ಥವಾಗದೆ ಉಳಿದಿರುವ ಮೊಕದ್ದಮೆಗಳು
1989-90	11638
1990-91	10813
1991-92	11594

ವಿಷಯ :- ರಾಜ್ಯದಲ್ಲಿ ಗ್ರಾನೈಟ್ ಉದ್ಯಮ.

Q:1496

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ಖನಿಜ ಸಂಸ್ಥೆಯವರು ಗ್ರಾನೈಟ್ ಕಲ್ಲುಗಳನ್ನು ಎಷ್ಟು ಪ್ರದೇಶದಲ್ಲಿ ತೆಗೆಯುತ್ತಿದ್ದಾರೆ?
ಆ) ಗ್ರಾನೈಟ್ ಉದ್ಯಮದಿಂದ ರಾಜ್ಯ ಸರ್ಕಾರಕ್ಕೆ ಬರುವ ರಾಜಧನವೆಷ್ಟು?
ಇ) ರಾಜಧನವನ್ನು ಪಡೆಯುವ ಇತರ ಖನಿಜಗಳ ಮಾಹಿತಿ ನೀಡುವುದು

ಶ್ರೀ ಡಿ.ಎ. ಚಿಣ್ಣಪ್ಪ (ಗಣಿ ಮತ್ತು ಭೂ ವಿಜ್ಞಾನ-ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದ ಅಂಗ ಸಂಸ್ಥೆಯಾದ ಮೈಸೂರು ಮಿನರಲ್ಸ್‌ಗೆ 1733 ಎಕರೆಯಷ್ಟು ಗುತ್ತಿಗೆ ಪ್ರದೇಶವಿದ್ದು ಅದರಲ್ಲಿ ಸುಮಾರು 416 ಎಕರೆಯಷ್ಟು ಪ್ರದೇಶದಲ್ಲಿ ಕಲ್ಲುಗಳನ್ನು ತೆಗೆಯುತ್ತಿದ್ದಾರೆ. 4 ಕಲ್ಲು ಗುಣಿಗುತ್ತಿಗೆಗಳನ್ನು ಹೊಂದಿದ್ದಾರೆ .
ಆ) 1991-92ನೇ ಸಾಲಿನಲ್ಲಿ 2.72 ಕೋಟಿಯಷ್ಟು ರಾಜಧನ ವಸೂಲಾಗಿದೆ.
1992-93ನೇ ಸಾಲಿನಲ್ಲಿ ಜನವರಿ ಅಂತ್ಯದವರೆಗೆ 2 ಕೋಟಿ ರೂ. ವಸೂಲಾಗಿದೆ.

ಇ) ಖನಿಜಗಳಾದ ಬಿಲ್ಡಿಂಗ್ ಸ್ಟೋನ್‌ಗಳು , ಶಹಬಾದ್ ಶಿಲೆ, ಪುಲ್ಲರ್ಸ್ ಅರ್ತ್ ಸಾಧಾರಣ ಮರಳು, ಲೈಮ್ ಷೆಲ್ ಕಂಕರ್ ಇಟ್ಟಿಗೆ ಹಾಗೂ ಹೆಂಚಿನ ಮಣ್ಣು, ಸುಣ್ಣಕಲ್ಲು ಇತ್ಯಾದಿ ಇದಲ್ಲದೆ ಖನಿಜಗಳಾದ ಕಬ್ಬಿಣದ ಅದಿರು ಮ್ಯಾಂಗನೀಸ್ ಸುಣ್ಣ ಕಲ್ಲು ಸಿಮೆಂಟ್ ತಯಾರಿಕೆಗೆ ಉಪಯೋಗಿಸುವ ಕ್ರೋಮೈಟ್ ಇತ್ಯಾದಿ.

ವಿಷಯ :- ಕರ್ನಾಟಕದ ಅನೇಕ ಪುರಸಭೆಗಳಲ್ಲಿ ಸಂಪನ್ಮೂಲ ಕೊರತೆ.

Q:1499

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕದ ಅನೇಕ ಪುರಸಭೆಗಳು ಸಂಪನ್ಮೂಲ ಕೊರತೆಯಿಂದ ತತ್ತರಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸಂಪನ್ಮೂಲ ಕೊರತೆ ನಿವಾರಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಪ್ರತಿ ವರ್ಷ ಜಕಾತಿ ಅನುದಾನವನ್ನು ಶೇಕಡ 12.5ರಂತೆ ಹೆಚ್ಚಿಸಲಾಗುತ್ತಿದೆ. ಇದಲ್ಲದೇ ಅಭಿವೃದ್ಧಿ ಅನುದಾನ, ಮನರಂಜನಾ ತೆರಿಗೆ ಹಾಗೂ ಸ್ಟ್ಯಾಂಪ್ ಡ್ಯೂಟಿಯಲ್ಲಿ ಭಾಗ ಹಾಗೂ ಇತ್ಯಾದಿಗಳನ್ನು ಮಂಜೂರು ಮಾಡಲಾಗುತ್ತಿದ್ದು, ಕರ್ನಾಟಕ ಪುರಸಭೆ ಕಾಯ್ದೆ 64ರಲ್ಲಿ ಇತರೆ ಕರ ವಸೂಲಾತಿಗೆ ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಪುರಸಭೆಗಳಿಗೆ ಅವಕಾಶ ಮಾಡಿಕೊಡಲಾಗಿದೆ. 1993-94ನೇ ಸಾಲಿನಿಂದ ಜಕಾತಿ ಪರಿಹಾರ ಧನವನ್ನು ಶೇಕಡ 15 ಪರ್‌ಸೆಂಟ್‌ರಷ್ಟು ಹೆಚ್ಚಿಸಲು ನಿರ್ಧರಿಸಿದೆ.